ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಮೀನುಗಾರರ ಯೋಜನೆಗಳ ಬಗ್ಗೆ

ಶ್ರೀಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

360 (375) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2018-29ನೇ ಸಾಲಿನಿಂದ ಇಲ್ಲಿಯವರೆಗೂ ರಾಜ್ಯದ ಮೀನುಗಾರರಿಗೆ ಎಷ್ಟು ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿದೆ ; ಇಲ್ಲವಾದಲ್ಲಿ, ಇದಕ್ಕೆ ಕಾರಣಗಳೇನು; ಈ ಮನೆಗಳಿಗೆ ಬಿಡುಗಡೆಯಾದ ಹಾಗೂ ಖರ್ಚಾದ ಮೊತ್ತ ಹಾಗೂ ಬಾಕಿ ಮೊತ್ತವೆಷ್ಟು ; (ವಿವರ ನೀಡುವುದು)

(ಆ) 2019ನೇ ಸಾಲಿನಲ್ಲಿ ಎನ್.ಎಫ್.ಡಿ.ಬಿ. ಯೋಜನೆಯಡಿ ಬಿಡುಗಡೆಯಾದ ಕೇಂದ್ರ ಹಾಗು ರಾಜ್ಯದ ಮೊತ್ತ ಎಷ್ಟು ; ಅದರಲ್ಲಿ ಖರ್ಚಾದ ಹಾಗೂ ಬಾಕಿ ಉಳಿದ ಮೊತ್ತದ ವಿವರ ನೀಡುವುದು ;

(ಇ) 2018, 2019 ಮತ್ತು 2020ನೇ ಸಾಲಿನಲ್ಲಿ ಏತ ನೀರಾವರಿ ಯೋಜನೆಯಡಿ ಬರುವ ಕೆರೆಗಳನ್ನು ಮೀನುಗಾರಿಕೆಗಾಗಿ ವಿಲೇವಾರಿ ಮಾಡಲಾಗಿದೆಯೇ ; (ತಾಲ್ಲೂಕುವಾರು, ಫಲಾನುಭವಿಯ /ಸಂಸ್ಥೆಯ ಹೆಸರು ಮತ್ತು ಮೊತ್ತದ ಮಾಹಿತಿ ನೀಡುವುದು)

(ಈ) 2019 ಮತ್ತು 2020ನೇ ಸಾಲಿನಲ್ಲಿ ರಾಜ್ಯ ಹಾಗೂ ಕೇಂದ್ರದಿಂದ ಯಾವ ಯಾವ ಯೋಜನೆಯಡಿ ಬಿಡುಗಡೆಯಾದ ಮೊತ್ತ ಎಷ್ಟು / ಖರ್ಚು ಎಷ್ಟು ; ಬಾಕಿ ಎಷ್ಟು ? (ಖರ್ಚು ಮಾಡಿದ್ದಲ್ಲಿ, ಸಂಪೂರ್ಣ ಯೋಜನೆಗಳವಾರು/ಫಲಾನುಭವಿಗಳ ವಿವರ ನೀಡುವುದು)